ದಿನಾಂಕಃ 11-01-2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.
ಮುಂದುವರಿದ ಪಾಟೀ ಸವಾಲುಃ- ಶ್ರೀ ಎನ್.ಕೆ.ಎಸ್. ವಕೀಲರಿಂದಃ-

7ನೇ ಪ್ರತಿವಾದಿ 5ನೇ ಪ್ರತಿವಾದಿಯ ಗಂಡ ಎಂದರೆ ಸರಿ. ದಾವಾ "ಬ" ಪುರವಣಿಯಲ್ಲಿ ತೋರಿಸಿದ ಆಸ್ತಿಯಲ್ಲಿ 5 ಮತ್ತು 7ನೇ ಪ್ರತಿವಾದಿಯರು ವಾಸವಾಗಿದ್ದಾರೆನ್ನುವದು ಸರಿಯಲ್ಲ. 7ನೇ ಪ್ರತಿವಾದಿ ಹಾಗೂ ಆತನ ಮಕ್ಕಳು ಮತ್ತು 1ನೇ ಪ್ರತಿವಾದಿ ಅದೇ ಮನೆಯಲ್ಲಿ ವಾಸವಾಗಿದ್ದಾರೆಂದರೆ ಸರಿ. 8ನೇ ಪ್ರತಿವಾದಿ ನಮ್ಮ ಕುಟುಂಬದ ಸದಸ್ಯರಲ್ಲ ಎಂದರೆ ಸರಿ. 3 ಮತ್ತು 6ನೇ ಪ್ರತಿವಾದಿಯರನ್ನು ಹಳಕಾರ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದಾರೆಂದರೆ ಸರಿ. ನಾನು ಹಳಕಾರ ಗ್ರಾಮದಲ್ಲಿ ವಾಸ್ತವ್ಯ ಮಾಡಿಕೊಂಡಿದ್ದೇನೆಂದರೆ ಸರಿ. ನಾನು ಬುದ್ಧ್ಯಾಪೂರ್ವಕವಾಗಿ 5 ಮತ್ತು 7ನೇ ಪ್ರತಿವಾದಿಯರ ವಿಳಾಸವನ್ನು ದಾವೆಯಲ್ಲಿ ತಪ್ಪಾಗಿ ವಾಳಗಳ್ಳಿ ಎಂದು ತೋರಿಸಿದ್ದೇನೆಂದರೆ ಸರಿಯಲ್ಲ. 7ನೇ ಪ್ರತಿವಾದಿ ನಮ್ಮ ತಂದೆಗೆ ಸಹಾಯ ಮಾಡುತ್ತಿದ್ದಾನೆಂದರೆ ಆತನು ಭಾಡಿಗೆಗೆ ಇರಬೇಕಾಗಿದ್ದು ಭಾಡಿಗೆ ಕೊಡಬೇಕಾಗುತ್ತದೆಂದು 1ನೇ ಪ್ರತಿವಾದಿಯ ಜೊತೆ ವಾಸವಾಗಿದ್ದಾನೆ ಎನ್ನುತ್ತಾರೆ. 1ನೇ ಪ್ರತಿವಾದಿಯನ್ನು ಅವನೇ ನೋಡಿಕೊಳ್ಳುತ್ತಿದ್ದಾನೆಂದರೆ ಸರಿ.

ಈ ದಾವೆ ಸಲ್ಲಿಸುವುದಕ್ಕಿಂತ ಮುಂಚೆ ನಾನು 1 ಮತ್ತು 2ನೇ ಪ್ರತಿವಾದಿಯರ ಮನೆಗೆ ಹೋಗಿ ಬರುತ್ತಿದ್ದೆನು. ಆ ಸಮಯದಲ್ಲಿ ಅವರು ನನಗೆ ಚೆನ್ನಾಗಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 1ನೇ ಪ್ರತಿವಾದಿಗೆ ದಾವಾಸ್ತಿಗಳಿಂದ ಎಷ್ಟು ಆದಾಯ ಬರುತ್ತದೆಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಗೆ ದಾವಾಸ್ತಿಗಳಿಂದ ಬರುವ ಆದಾಯ ಹೊರತುಪಡಿಸಿ ಬೇರೆ ಯಾವುದೇ ಆದಾಯ ಇಲ್ಲ ಎಂದರೆ ಸರಿ. 1ನೇ ಪ್ರತಿವಾದಿಗೆ ದಾವಾಸ್ತಿಗಳಿಂದ ಬರುವ ಆದಾಯ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಹೆಚ್ಚಿಗೆ ಬೇಕಾದಲ್ಲಿ ನಾವು 5 ಜನರು ಸೇರಿ ಸಹಾಯ ಮಾಡುತ್ತೇವೆ. ನಾನು ಸಹಾಯ ಮಾಡಿದ ಬಗ್ಗೆ ಯಾವುದೇ ದಾಖಲೆಯನ್ನು ಬರೆದು ಇಟ್ಟಿಲ್ಲ. 1ನೇ ಪ್ರತಿವಾದಿಗೆ ಎಷ್ಟು ಹಣದ ಸಹಾಯ ಮಾಡಿದ್ದೇನೆಂದು ನೆನಪಿಲ್ಲ. ನನ್ನ ಗಂಡನ ಮನೆಯಲ್ಲಿ ನನ್ನ ಗಂಡನಿಗೆ ಸಂಬಂಧಪಟ್ಟಂತೆ ಯಾವುದೇ ಜಮೀನು ಇರುವುದಿಲ್ಲ. ದೇವಸ್ಥಾನದ ಪೂಜೆ ಮಾಡಿಕೊಂಡಿದ್ದಾರೆ. ದೇವಸ್ಥಾನದಿಂದ ಸಾಕಷ್ಟು ಉತ್ಪನ್ನ ಬರುತ್ತದೆ ಎನ್ನುವದು ಸರಿಯಲ್ಲ. ಅದು ನಮ್ಮ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ. ನಾನು 1ನೇ ಪ್ರತಿವಾದಿಗೆ ಯಾವುದೇ ಹಣ ಸಹಾಯ ಮಾಡಿರುವುದಿಲ್ಲವೆಂದರೆ ಸರಿಯಲ್ಲ. 1ನೇ ಪ್ರತಿವಾದಿಯೇ ನಮ್ಮ 5 ಜನರ ಮದುವೆ ಮಾಡಿದ್ದಾರೆಂದರೆ ಸರಿ. 1ನೇ ಪ್ರತಿವಾದಿಯು ಕುಟುಂಬದ ಹಣಕಾಸಿನ ಸಲುವಾಗಿ ಸರ್ವೆ ನಂ.138 ಹಿಸ್ಸಾ 2ಬ1 ರಲ್ಲಿ ಜಮೀನನ್ನು ಮಾರಾಟ ಮಾಡಲು ಒಪ್ಪಿಕೊಂಡು ಎರಡು

ಲಕ್ಷದಾ ಐವತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆಂದರೆ ಸರಿಯಲ್ಲ. ಆ ವಿಚಾರ ನಮಗೆ ಗೊತ್ತಿದೆ ಎಂದರೆ ಸರಿಯಲ್ಲ. ದಿಃ11-5-2015 ರಂದು 1ನೇ ಪ್ರತಿವಾದಿಯು 7ನೇ ಪ್ರತಿವಾದಿಗೆ ಕ್ರಯದ ದಸ್ತವೇಜ ಮಾಡಿಕೊಟ್ಟಿದ್ದಾರೆಂದರೆ ನನಗೆ ಗೊತ್ತಿಲ್ಲ. ಆ ವಿಚಾರ ನನಗೆ ಗೊತ್ತಿದೆ ಎನ್ನುವದು ಸರಿಯಲ್ಲ. 2012 ರಲ್ಲಿ 7ನೇ ಪ್ರತಿವಾದಿಯ ಹೆಸರಿನಲ್ಲಿ ಕಂದಾಯ ದಾಖಲೆಗಳಲ್ಲಿ ಹೆಸರು ನಮೂದಾಗಿದೆ ಎನ್ನುವದು ನನಗೆ ಗೊತ್ತಿಲ್ಲ. ಕಳೆದ 11 ವರ್ಷಗಳಿಂದ 7ನೇ ಪ್ರತಿವಾದಿ 1 ಮತ್ತು 2ನೇ ಪ್ರತಿವಾದಿಯರಿಗೆ ಸಹಾಯ ಮಾಡುತ್ತಿದ್ದಾನೆಂದರೆ ಸರಿಯಲ್ಲ. ಅವರಿಗೆ ಅನಾರೋಗ್ಯವಾದಾಗ 7ನೇ ಪ್ರತಿವಾದಿಯೇ ಚಿಕಿತ್ಸೆ ಕೊಡಿಸಿದ್ದಾನೆಂದರೆ ಸರಿಯಲ್ಲ. 1ನೇ ಪ್ರತಿವಾದಿ ಸರ್ವೆ ನಂ.138 ಹಿಸ್ಸಾ 2ಬ1 ದಾವಾ "ಬ" ಶೆಡ್ಯೂಲ ಆಸ್ತಿಯಲ್ಲಿ ವಾಸ್ತವ್ಯ ಮಾಡಿಕೊಂಡಿದ್ದಾನೆಂದರೆ ಸರಿ. ಪಂಚಾಯತಿ ರೆಕಾರ್ಡ್‌ಗಳಲ್ಲಿ 7ನೇ ಪ್ರತಿವಾದಿಯ ಹೆಸರು ದಾಖಲಾಗಿದೆ ಎನ್ನುವದು ನನಗೆ ಗೊತ್ತಿಲ್ಲ. ಸರ್ವೆ ನಂ.138 ಹಿಸ್ಸಾ 2ಬ1 ದಾವಾ "ಬ" ಶೆಡ್ಯೂಲ ಆಸ್ತಿಯಲ್ಲಿರುವ ಮನೆ ಯಾವ ವರ್ಷ ಕಟ್ಟಿಸಿದ್ದಾರೆಂದು ನನಗೆ ಗೊತ್ತಿಲ್ಲ. ದಾವಾ "ಬ" ಶೆಡ್ಯೂಲ ಸ್ವತ್ತು 1ನೇ ಪ್ರತಿವಾದಿಗೆ ಯಾವ ರೀತಿ ಬಂದಿದೆ ಎಂದು ಗೊತ್ತಿಲ್ಲ. ಆದರೆ ಅದು ನಮ್ಮ ದೊಡ್ಡಪ್ಪ ಹಾಗೂ ನನ್ನ ತಂದೆಗೆ ವಿಭಾಗ ಬಂದಿದೆ ಎಂದು ಸ್ವ ಇಚ್ಛೆಯಿಂದ ನುಡಿಯುತ್ತಾರೆ. ನನ್ನ ದೊಡ್ಡಪ್ಪನ ಹೆಸರು ಹನಮಂತ ನಾರಾಯ ಗುನಗ. ಯಾವ ವರ್ಷದಲ್ಲಿ ವಿಭಾಗ ಮಾಡಿಕೊಂಡಿದ್ದಾರೆಂದು ಗೊತ್ತಿಲ್ಲ. ಆ ಬಗ್ಗೆ ದಸ್ತುವೇಜ ಆದ ಬಗ್ಗೆ ನನಗೆ ಗೊತ್ತಿಲ್ಲ. ವಿಭಾಗ ಪತ್ರದಲ್ಲಿ ದಾವಾ "ಬ" ಶೆಡ್ಯೂಲ ಸ್ವತ್ತಿನಲ್ಲಿರುವ ಮನೆ ವಿಭಾಗವಾದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತನ್ನ ಸ್ವ ಸಂಪಾದನೆಯಿಂದ ಮನೆ ಕಟ್ಟಿಸಿಕೊಂಡಿದ್ದಾನೆಂದರೆ ಸರಿಯಲ್ಲ. ಸದ್ರಿ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲವೆನ್ನುವದು ಸರಿಯಲ್ಲ. ದಾವಾ "ಬ" ಶೆಡ್ಯೂಲ ಸ್ವತ್ತು 1ನೇ ಪ್ರತಿವಾದಿಗೆ ಆತನ ತಂದೆಯಿಂದ ಬಂದಿದೆ ಎಂದು ತೋರಿಸಲು ನನ್ನ ಹತ್ತಿರ ಯಾವುದೇ ದಾಖಲೆ ಇರುವುದಿಲ್ಲ. ಸದ್ರಿ ಮನೆಯಲ್ಲಿ 1ನೇ ಪ್ರತಿವಾದಿಯನ್ನು ಹೊರತುಪಡಿಸಿ ನನಗಾಗಲೀ ಬೇರೆಯವರಿಗಾಗಲೀ ಹಕ್ಕು ಇರುವುದಿಲ್ಲವೆನ್ನುವದು ಸರಿಯಲ್ಲ. ಸರ್ವೆ ನಂ.11ಃ4 ರಲ್ಲಿ 1 ಗುಂಟೆ ಸ್ಥಳವು ರಸ್ತೆಗೆ ಹೋಗಿದೆ ಎನ್ನುವದು ಸರಿಯಲ್ಲ. ನನಗೆ ಸರ್ವೆ ನಂ.11 ಹಿಸ್ಸಾ 10 ಈ ರಲ್ಲಿ 1/7 ಅಂಶದ ಭಾಗಾಂಶದ ಹಕ್ಕು ಮಾತ್ರ ಇದೆ ಎಂದರೆ ಸರಿಯಲ್ಲ. ಸದ್ರಿ ಸ್ವತ್ತಿನಲ್ಲಿ ನನಗೆ 1/7 ಅಂಶದ ಭಾಗ ಕೊಡಲು ಯಾವುದೇ ತಕ್ರಾರು ಇಲ್ಲ ಎಂದರೆ ಸಾಕ್ಷಿ ನನಗೆ ಎಲ್ಲಾ ಸ್ವತ್ತುಗಳಲ್ಲಿ ಭಾಗ ಕೊಡಬೇಕೆಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ನಾನು ದಾವಾ ಸಲ್ಲಿಸುವುದಕ್ಕಿಂತ ಮುಂಚೆ ವಿಭಾಗ ಕೊಡಬೇಕೆಂದು ಕೇಳಿರುವುದಿಲ್ಲವೆಂದರೆ ಸರಿಯಲ್ಲ.

ಭವಾನಿ ಗಣಪತಿ ನಾಯ್ಕ ರವರು ಎಲ್ಲಿ ವಾಸ್ತವ್ಯ ಮಾಡಿಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಗಣೇಶ ಗಣಪತಿ ನಾಯ್ಕ ಎನ್ನುವವರು ನಮ್ಮ ಊರಿನವರಾಗಿದ್ದಾರೆ. ಅವರು ಯಾವ ಉದ್ಯೋಗ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ನಿ.ಪಿ-8 ರಂತೆ ಸರ್ವೆ ನಂ.11 ಹಿಸ್ಸಾ 10 ಈ ರಲ್ಲಿ 3 ಗುಂಟೆ ಸ್ಥಳವನ್ನು 8ನೇ ಪ್ರತಿವಾದಿಗೆ 1ನೇ ಪ್ರತಿವಾದಿ ತೊಂಬತ್ತು ಸಾವಿರ ರೂಪಾಯಿಗೆ ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. 7ನೇ ಪ್ರತಿವಾದಿಗೆ ಮಾರಾಟ ಮಾಡಿದ ಕ್ರಯಪತ್ರವನ್ನು ಹಾಜರಪಡಿಸಿದ್ದೇನೆಂದರೆ ಸರಿ. 1ನೇ ಪ್ರತಿವಾದಿ ತನ್ನ ಕುಟುಂಬದ ಅವಶ್ಯಕತೆಗಾಗಿ ಎರಡೂ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. ನನ್ನ ಗಂಡ ಮುಂದಾಗಿ ಬುದ್ಯಾಪೂರ್ವಕವಾಗಿ 1 ಮತ್ತು 2ನೇ ಪ್ರತಿವಾದಿಯ ವಿರುದ್ಧ ನನ್ನ ಹೆಸರಿನಲ್ಲಿ ದಾವೆ ಮಾಡಿಸಿದ್ದಾರೆಂದರೆ ಸರಿಯಲ್ಲ.

ಪಾಟೀ ಸವಾಲುಃ 8ನೇ ಪ್ರತಿವಾದಿ ಎಸ್.ಆರ್.ಎಸ್ ವಕೀಲರಿಂದಃ-

8ನೇ ಪ್ರತಿವಾದಿ ಹಾಗೂ ಅವರ ಪರ ವಕೀಲರನ್ನು ಕೂಗಿಸಲಾಗಿ ಅವರು ಗೈರ ಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಸಿವಿಲ್ ಜಡ್ಜ್ ಕುಮಟಾ.